FEBRUARY 06, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ವಿದ್ಯಾರ್ಥಿಗಳು ಜೀವನ** ಕೌಶಲವನ್ನು ಬೆಳೆಸಿಕೊಳ್ಳಬೇಕು, ಆಟ ಹಾಗೂ ಪಾಠಕ್ಕೂ ಮಹತ್ವ ನೀಡಿ, ಸಮತೋಲನ ಕಾಪಾಡಿಕೊಳ್ಳಬೇಕು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು. ಹೊಸದಿಲ್ಲಿಯ ಜಿ.ಎಂ.ಸಿ ಬಾಲಯೋಗಿ ಸಭಾಭವನದಲ್ಲಿ ಆಯೋಜಿತ, 9 ನೇ ಆವೃತ್ತಿಯ 'ಪರೀಕ್ಷಾ ಪೇ ಚರ್ಚಾ' ಕಾರ್ಯಕ್ರಮದಲ್ಲಿ, ವಿದ್ಯಾರ್ಥಿಗಳೊಂದಿನ ಸಂವಾದದಲ್ಲಿ ಅವರು ಕಿವಿಮಾತು ಹೇಳಿದರು.

<><><>

**ಪ್ರಧಾನಿ ನರೇಂದ್ರ ಮೋದಿ ಧ್ವನಿ 44 ಸೆಕೆಂದುಗಳು**

<><><>

**ದೆಹಲಿ ಕರ್ನಾಟಕ ಸಂಘ 2024 ಹಾಗೂ** 2025 ನೇ ಸಾಲಿನ 4 ಪ್ರತಿಷ್ಠಿತ ಪ್ರಶಸ್ತಿ ವಿಜೇತರ ಪಟ್ಟಿಯನ್ನು ಪ್ರಕಟಿಸಿದೆ. ರಾಷ್ಟ್ರಕವಿ ಕುವೆಂಪು ಪ್ರಶಸ್ತಿಗೆ ಡಾಕ್ಟರ ಹಂಪ ನಾಗರಾಜಯ್ಯ ಹಾಗೂ ಡಾಕ್ಟರ ಪ್ರಧಾನ ಗುರುದತ್, ಡಾಕ್ಟರ ಶಿವರಾಮ ಕಾರಂತ ಪ್ರಶಸ್ತಿಗೆ ಪಟ್ಲ ಸತೀಶ ಶೆಟ್ಟಿ ಹಾಗೂ ಕೆರೆಮನೆ ಶಿವಾನಂದ ಹೆಗಡೆ, ಡಾಕ್ಟರ ಸರೋಜಿನಿ ಮಹಿಷಿ ಪ್ರಶಸ್ತಿಗೆ ಬಿ.ಆರ್ ಲಕ್ಷ್ಮಣರಾವ್ ಹಾಗೂ ಡಾಕ್ಟರ ಲತಾ ರಾಜಶೇಖರ, ಕನ್ನಡ ಭಾರತಿ ರಂಗ ಪ್ರಶಸ್ತಿಗೆ ಟಿ.ಎಸ್ ನಾಗಭರಣ ಹಾಗೂ ಚರಣ್ ರಾಜ್ ಭಾಜನರಾಗಿದ್ದಾರೆ. ಪ್ರಶಸ್ತಿ ತಲಾ 50 ಸಾವಿರ ರೂಪಾಯಿ ನಗದು ಹಾಗೂ ಅಭಿನಂದನಾ ಫಲಕ ಒಳಗೊಂಡಿದೆ. 8 ನೇ ತಾರೀಖಿನಂದು ಹೊಸದಿಲ್ಲಿಯ ಕರ್ನಾಟಕ ಸಂಘದ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಯೋಜಿತವಾಗಿದೆ.

<><><>

**ರಸ್ತೆ ಅಪಘಾತದ,** 43 ಸಾವಿರ ಪ್ರಕರಣಗಳು, ಕಳೆದ 2025ರಲ್ಲಿ ದಾಖಲಾಗಿವೆ. ರಾಜ್ಯದಲ್ಲಿ, ಲಕ್ಷಾಂತರ ಜನ ಪ್ರಾಣ ಕಳೆದುಕೊಂಡಿದ್ದಾರೆ ಎಂದು, ಗೃಹ ಖಾತೆ ಸಚಿವ, ಜಿ. ಪರಮೇಶ್ವರ ಕಳವಳ ವ್ಯಕ್ತ ಪಡಿಸಿದ್ದಾರೆ. ಬೆಂಗಳೂರು ಅರಮನೆ ಮೈದಾನದಲ್ಲಿ, 'ಇ–ಡಾರ್ ಆಪ್' ಅನುಷ್ಠಾನ ಹಾಗೂ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ 2026, ಸಮಾರೋಪ ಸಮಾರಂಭ'ದಲ್ಲಿ, ಅವರು ಮಾತನಾಡಿದರು. ಕುಟುಂಬಕಲ್ಯಾಣ ಖಾತೆ ಸಚಿವ, ದಿನೇಶ ಗುಂಡೂರಾವ ಮಾತನಾಡಿ, ರಸ್ತೆ ಅಪಘಾತದ ಸಂದರ್ಭದಲ್ಲಿ, ಸಂತ್ರಸ್ತ ಕುಟುಂಬ, ವಿಮಾ ಕಂಪೆನಿಗಳಿಂದ ಪರಿಹಾರ ಪಡೆಯಲು, ವಿಳಂಬ ಮತ್ತು ತೊಂದರೆಯಾಗದಂತೆ, ಇ–ಡಾರ್ ಆಪ್ ಸಹಕಾರಿಯಾಗಲಿದೆ, ಎಂದರು.

<><><>

**ಬೆಳಗಾವಿ, ಸವದತ್ತಿ ತಾಲೂಕು** ಎಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನ ಈ ತಿಂಗಳ 21 ರಂದು, ಶನಿವಾರ ಮುನವಳ್ಳಿಯಲ್ಲಿ ಆಯೋಜಿತವಾಗಿದೆ. ಸಮ್ಮೇಳನದ ಸರ್ವಾಧ್ಯಕ್ಷರಾಗಿ ಹಿರಿಯ ಸಾಹಿತಿ, ಧಾರವಾಡ ಆಕಾಶವಾಣಿ ಕೇಂದ್ರದ, ನಿವೃತ್ತ ನಿರ್ದೇಶಕ ಡಾಕ್ಟರ ಬಸು ಬೇವಿನಗಿಡದ ಆಯ್ಕೆಯಾಗಿದ್ದಾರೆ. ಸವದತ್ತಿ ತಾಲೂಕಾ ಕನ್ನಡ ಸಾಹಿತ್ಯ ಪರಿ  ತ್ತಿನ ಅಧ್ಯಕ್ಷ, ಡಾಕ್ಟರ ವೈ.ಎಂ. ಯಾಕೊಳ್ಳಿ ಸೇರಿದಂತೆ, ಪದಾಧಿಕಾರಿಗಳು ಡಾಕ್ಟರ ಬಸು ಬೇವಿನಗಿಡದ ದಂಪತಿಯನ್ನು ಸಮ್ಮೇಳನಕ್ಕೆ ಆಮಂತ್ರಿಸಿ, ಸನ್ಮಾನಿಸಿದರು.

<><><>

**ಧಾರವಾಡ ಲೋಕಸಭಾ ವ್ಯಾಪ್ತಿಯ ಹುಬ್ಬಳ್ಳಿ,** ಕೇಶ್ವಾಪುರದ ಆಕ್ಸಫರ್ಡ್ ಕಾಲೇಜು ಸಮೀಪದ ಮೈದಾನದಲ್ಲಿ, ನಾಳೆ ಹಾಗೂ ನಾಡಿದ್ದು ಎರಡು ದಿನಗಳ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವ 2026 ಆಯೋಜಿತವಾಗಿದೆ. ಸಾಂಸ್ಕೃತಿಕ ವೈಭವವನ್ನು ಜಾಗತಿಕ ಮಟ್ಟದಲ್ಲಿ ಪ್ರದರ್ಶಿಸಲು ಬೃಹತ್ ವೇದಿಕೆ ಸಜ್ಜಾಗುತ್ತಿದ್ದು, ಇದರ ಪೂರ್ವಭಾವಿಯಾಗಿ ಭೂಮಿಪೂಜೆ ನೆರವೇರಿಸಲಾಯಿತು. ಸಂಸದ ಖೇಲ್ ಮಹೋತ್ಸವದ ಅಂಗವಾಗಿ ಆಯೋಜಿತ, ಗಾಳಿಪಟ ಉತ್ಸವದಲ್ಲಿ ವಿವಿಧ ದೇಶಗಳ ಗಾಳಿಪಟ ಪಟುಗಳು ಪಾಲ್ಗೊಳ್ಳಲಿದ್ದಾರೆ, ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವರಾದ ಪ್ರಲ್ಹಾದ್ ಜೋಶಿ ತಮ್ಮ ಎಕ್ಸ್ ಖಾತೆ ಮೂಲಕ ತಿಳಿಸಿದ್ದಾರೆ.

<><><>

**ಹುಬ್ಬಳ್ಳಿ ಧಾರವಾಡ ಮಹಾನಗರ** ಪಾಲಿಕೆಯ ವಲಯ ಕಚೇರಿ 12 ರ, ಸರಸ್ವತಪುರ, ಮಸಾಲಗಾರ ಓಣಿಯಲ್ಲಿ, ಸ್ವಚ್ಛ ಸರ್ವೇಕ್ಷಣ 2.0 ಅಭಿಯಾನದಡಿ, ಜಾಗೃತಿ–ಅರಿವು ಜಾಥಾ ಕಾರ್ಯಕ್ರಮ ಆಯೋಜಿಸಲಾಯಿತು. ಸಾರ್ವಜನಿಕರಿಗೆ ಕಸದ ವಿಂಗಡಣೆ ಹಾಗೂ ತ್ಯಾಜ್ಯ ವಿಲೇವಾರಿ ಕ್ರಮಗಳ ಕುರಿತು ಮಾಹಿತಿ ನೀಡಲಾಯಿತು.

<><><>

**ಭಾರತೀಯ ನೆಫ್ರಾಲಜಿ ಸೊಸಾಯಿಟಿ,** ದಕ್ಷಿಣ ಭಾರತ ವಿಭಾಗ, ಕರ್ನಾಟಕ ನೆಫ್ರಾಲಜಿ ಅಸೋಸಿಯೇಷನ್ ಆಶ್ರಯದಲ್ಲಿ, ದಕ್ಷಿಣ ಭಾರತ ವಲಯದ, ತಜ್ಞ ವೈದ್ಯರ 45ನೇ ವಾರ್ಷಿಕ ಸ್ನೇಹ ಸಮ್ಮೇಳನ, ಇಂದು ಮತ್ತು ನಾಳೆ, ಹುಬ್ಬಳ್ಳಿಯಲ್ಲಿ ನಡೆಯಲಿದೆ.

<><><>

**ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲೂಕಿನ, ಬಿಳ್ಳೂರು –ಶಿವಪುರ** ಗ್ರಾಮಗಳ ನಡುವೆ 2 ಕೋಟಿ 50 ಲಕ್ಷ ರೂಪಾಯಿ ವೆಚ್ಚದ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್.ಎನ್ ಸುಬ್ಬಾರೆಡ್ಡಿ ಅವರು ಇಂದು ಸಂಜೆ 4.30 ಕ್ಕೆ ಭೂಮಿಪೂಜೆ ನೆರವೇರಿಸಲಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>